***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ;ರವರ ನ್ಯಾಯಾಲಯಃ ಮಾನವಿ***

***ಸಿ.ಸಿ. ನಂಃ335/2024***

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ ಸಿರವಾರ ಪೊಲೀಸರು

ಃವಿಃ

ಆರೋಪಿತರು ಃ ವಿರುಪಾಕ್ಷಯ್ಯ ತಂದೆ ಅಮರಯ್ಯ ಹಿರೇಮಠ

೦೦೦೦

***ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313ರ ಪ್ರಕಾರ ಆರೋಪಿ ಹೇಳಿಕೆ***

ಪ್ರ:೧ಃ ಅಭಿಯೋಜನೆಯವರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃಆಃ೧ಃ ಕೇಳಿದ್ದೆವೆ

ಪ್ರ:೨ಃ ಪ್ರಾಸಾ ೧ ಶಂಕ್ರಮ್ಮ ಹೇಳುತ್ತಾರೆ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ-೨ ಅವರ ಮೊಮ್ಮಗ. ಚಾಸಾ-೩ ಅವರ ಗಂಡ, ಅವರು ತೀರಿಕೊಂಡಿದ್ದಾರೆ. ಚಾಸಾ-೪ ರಿಂದ ೭ ರವರ ಪರಿಚಯವಿದೆ. ಆರೋಪಿಯ ಪರಿಚಯವಿದೆ. ಎಂದು ಹೇಳಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರ:೩ಃ ಪ್ರಾಸಾ ೧ ಮುಂದುವರೆದು ಹೇಳುತ್ತಾರೆ ಸುಮಾರು ೨ ವರ್ಷಗಳ ಹಿಂದೆ ಸ-5-00 ಗಂಟೆಗೆ ಅವರು, ಅವರ ಗಂಡ ಮತ್ತು ಚಾಸಾ-೨ ನನ್ನ ಮೊಮ್ಮಗ ನಿಮ್ಮ ಮನೆಯ ಮುಂದಿನಿಂದ ಹೋಗುತ್ತಿದ್ದಾಗ ನೀವು ಬಂದು ಅವರ ಗಂಡ ಚಾಸಾ-೩ ರವರಿಗೆ ಹಿಡಿದು ಎಳೆದಾಡಿ, ಚಾಸಾ-೨ ರವರ ಮೂಗಿನ ಮೇಲೆ ಗುದ್ದಿ, ಕಲ್ಲಿನಿಂದ ಅವರ ಎಡ ಕಾಲಿನ ಮೇಲೆ ಹೊಡೆದಿದ್ದರಿಂದ ಅವರು, ಅವರ ಗಂಡ ಮತ್ತು ಅವರ ಮೊಮ್ಮಗ ಆಸ್ಪತ್ರೆಗೆ ಹೋಗಿದ್ದೇವೆ ಎಂದು ಹೇಳಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರ:೪ಃ ಈ ಪುಕರಣದಲ್ಲಿ ಪ್ರಾಸ ೭ ಗುರುಚಂದ್ರ ಪಿ.ಎಸ್.ಐ ರವರು ಈ ಪ್ರಕರಣದ ಕುರಿತಂತೆ ದಿ: ೩೧-೧೨-೨೦೨೩ ರಂದು ಸಂಃ ೦೫.೦೦ ಗಂಟೆಗೆ ಅವರು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-೧ ರವರು ನಿಪಿ-೧ ರಡಿಯಲ್ಲಿರುವ ಲಿಖಿತ ದೂರನ್ನು ಮತ್ತು ಅವರ

ಮುಂದೆ ನೀಡಿದ್ದು ಅದನ್ನು ಸ್ವೀಕರಿಸಿಕೊಂಡು ಪ್ರ.ವ.ವರದಿ ತಯಾರಿಸಿ ಅದನ್ನು ಗು.ನಂ. ೧೬೪/೨೦೨೩ ರಲ್ಲಿ ದಾಖಲು ಮಾಡಿಕೊಂಡು, ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ ಎಂದು ಹೇಳಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರಃ೫ಃ ಪ್ರಾಸಾ ೭ ಮುಂದುವರೆದು ಹೇಳುತ್ತಾರೆ ದಿ:01-01-2024 ಪಂಚನಾಮೆಗಿಂತ ಮುಂಚೆ ಚಾಸಾ-೧ ರವರ ಘಟನಾ ಸ್ಥಳಕ್ಕೆ ಕುರಿತಂತೆ ನೀಡಿದ ಮರುಹೇಳಿಕೆಯನ್ನು ಪಡೆದುಕೊಂಡು ನಂತರ ಅದೇ ದಿನ ಬೆ-10-30 ರಿಂದ 11-30 ಗಂಟೆ ಸಮಯದಲ್ಲಿ ಚಾಸಾ-೧ ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-೬ ಮತ್ತು ೭ ರವರ ಸಮಕ್ಷಮ ಸ್ಥಳಪಂಚನಾಮೆಯನ್ನು ಮಾಡಿ ಸ್ಥಳದಲ್ಲಿ ಸಿಕ್ಕ ಹಿಡಿ ಗಾತ್ರದ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರಃ೬ಃ ಪ್ರಾಸಾ ೭ ಮುಂದುವರೆದು ಹೇಳುತ್ತಾರೆ ಚಾಸಾ-೨ ರಿಂದ ೫ ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡ ಕಲ್ಲನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರಿಗೆ ನೋಟಿಸನ್ನು ನೀಡಿ ಅವರನ್ನು ತನಿಖೆ ಮಾಡಿ ಅವರ ಸ್ವ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ದಿ:೦೭-೦೧-೨೦೨೪ ರಂದು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರಃ೭ಃ ಪ್ರಾಸಾ ೭ ಮುಂದುವರೆದು ಹೇಳುತ್ತಾರೆ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ಸದರಿ ಪ್ರಕರಣದಲ್ಲಿ ಉಲ್ಲೇಖಿಸಿರುವ ಆರೋಪಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಆತನ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಎಂದು ಹೇಳಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ೧ಃ ಸುಳ್ಳು

ಪ್ರಃ೮ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?
ಉಃಆಃ೧ಃ ಸುಳ್ಳು

ಪ್ರಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?
ಉಃಆಃಗಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 22ನೇ ದಿವಸ ಜುಲೈ ಮಾಹೆ 2026

(ಕಂಚಿ ಮಾಯಣ್ಣ ಗೌತಮ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ; ಮಾನವಿ.